**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1979/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಪಾರ್ಜಾನ್ | ಪ್ರಾಸಾ -4 |
| ಗಂಡನ ಹೆಸರು | : ಮೊಹಮ್ಮದ್ ಖುನ್ನಿ | ಚಾಸಾ-9 |
| ವಯಸ್ಸು | : 33 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗೃಹಿಣಿ | ದಿನಾಂಕಃ21.11.2024 |
| ವಾಸಸ್ಥಳ | : ಪುತ್ತೂರು | |

(ಸಾಕ್ಷಿಯು ತಮಗೆ ಕನ್ನಡ ಭಾಷೆ ಮಾತನಾಡಲು ಬರುವುದಿಲ್ಲ ಹಾಗೂ ತಾವು ಮಲೆಯಾಳಂ ನಲ್ಲಿ ಸಾಕ್ಷ್ಯ ನುಡಿಯುವುದಾಗಿ ಹೇಳಿಕೊಂಡ ಕಾರಣ ನ್ಯಾಯಾಲಯದಲ್ಲಿ ಹಾಜರಿರುವ ಕುಮಾರಿ ಶಿಲ್ಪಾ ದಾಸ್ ವಕೀಲರು ತಮಗೆ ಕನ್ನಡ ಮತ್ತು ಮಲೆಯಾಳಂ ಭಾಷೆ ಬರುತ್ತದೆ ಎಂದು ತಿಳಿಸಿದ್ದ ಕಾರಣ ಅವರನ್ನು ಭಾಷಾಂತಕರರಾಗಿ ನೇಮಕ ಮಾಡಿಕೊಂಡು ಅವರಿಗೆ ಪ್ರಮಾಣವಚನ ಭೋಧಿಸಲಾಗಿದೆ.)

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ಆರೋಪಿಯ ಪರಿಚಯ ನನಗಿಲ್ಲ.

ಸಾಕ್ಷಿಯು ದಿ.17.05.2023 ರ ನೋಟೀಸು, ಉತ್ತರ ಮತ್ತು ಇಂಡಿಮಿನಿಟಿ ಬಾಂಡ್ ನಲ್ಲಿ ತಮ್ಮ ಸಹಿಗಳನ್ನು ಗುರುತಿಸಿರುತ್ತಾರೆ. ಸದರಿ ದಾಖಲೆಗಳನುನ ನಿಪಿ-7 ರಿಂದ 9, ಸಾಕ್ಷಿಯ ಸಹಿಗಳನ್ನು ನಿಪಿ.7(ಎ) ಮತ್ತು 9(ಎ) ಎಂದು ಗುರುತಿಸಲಾಯಿತು.

1 ವರ್ಷದ ಹಿಂದೆ ಮೂಡಿಗೆರೆಯಲ್ಲಿ ಪೋಲಿಸರು ನನ್ನ ಸಹಿಗಳನ್ನು ಪಡೆದಿದ್ದು, ನಿಪಿ-7 ರಿಂದ 9 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ದಾಖಲೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ಆರೋಪಿ ನನ್ನ ಬಳಿ ಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. KA-21-C-4813 ಈಚರ್ ಲಾರಿ ನನಗೆ ಸೇರಿದ್ದು ಎಂದರೆ ಸರಿ. ದಿ.12.05.2023 ರಂದು ಸದರಿ ವಾಹನವನ್ನು ಆರೋಪಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ವಾಹನವನ್ನು ಆರೋಪಿಯು ಆ ದಿನ ಬೆಳಗ್ಗೆ 3.15 ರ ಸಮಯಕ್ಕೆ ಬಣಕಲ್ ನ ಮತ್ತಿಕಟ್ಟೆ ಬಳಿ ಅಪಘಾತಪಡಿಸಿದ್ದಾರೆ ಎಂದರೆ ಸರಿಯಲ್ಲ. ಆ ಅಪಘಾತದಿಂದ ಮಂಜುನಾಥ್ ರವರು ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ಮತ್ತು 3 ರಲ್ಲಿ ಕಾಣುವ ವಾಹನ ನನಗೆ ಸೇರಿದ್ದು ಎಂದರೆ ಸರಿ.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಯು ನನ್ನ ಚಾಲಕರಾದ ಕಾರಣ ಅವರಿಗೆ ಶಿಕ್ಷೆಯಾಗುತ್ತದೆ ಎಂದು ಹಾಗೂ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ.ಎ.ಎಂ. ವಕೀಲರಿಂದಃ**

ನಿಪಿ-7 ರಿಂದ 9 ಕ್ಕೆ ಸಹಿ ಮಾಡುವಾಗ ಅದು ಖಾಲಿ ಇತ್ತು ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

ಮೇಲಿನ ಸಾಕ್ಷ್ಯವನ್ನು ಸಾಕ್ಷಿಯು ಹೇಳಿದ ರೀತಿಯಲ್ಲಿ
ಭಾಷಾಂತರಗೊಳಿಸಿ ನಾನು ಹೇಳಿದ ರೀತಿಯಲ್ಲಿ
ಇದೆ ಎಂದು ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತೇನೆ.

ಭಾಷಾಂತರಗಾರರ ಸಹಿಃ